Re.No. D. 221

भारत का राजपत्र
The Gazette of India
ಭಾರತ ರಾಜಪತ್ರ

(Extraordinary)
(ವಿಶೇಷ ಸಂಚಿಕೆ)

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | |
|---|---|---|
| सं 1, नई दिल्ली, बुधवार, 18 मई, 2022 | वैशाख 18, 1944 (शक) | खंड. 52 |
| No.1. New Delhi. Wednesday. May 18. 2022 | Vaishaka 18. 1944 (Saka) | Vol. 52 |
| ನಂ.1. ನವದೆಹಲಿ. ಬುಧವಾರ. ಮೇ 18. 2022 | ವೈಶಾಖ 18. 1944 (ಶಕ) | ಸಂಪುಟ. 52 |

**Ministry of Law and Justice**
(Legislative Department)
New Delhi, 18th May, 2022

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**(ವಿಧಾಯೀ ಇಲಾಖೆ)**
**ನವದೆಹಲಿ, 18ನೇ ಮೇ, 2022**

The Translation in Kannada of the following Act, namely:- (1) THE PASSPORT (ENTRY INTO INDIA) ACT, 1920 (ACT NO. 34 OF 1920) (2) THE PREVENTION AND CONTROL OF INFECTIOUS AND CONTAGIOUS DISEASES IN ANIMALS ACT, 2009 (ACT NO. 27 OF 2009) (3) THE LEGAL METROLOGY ACT, 2009 (ACT NO. 1 OF 2010) (4) THE CLINICAL ESTABLISHMENTS (REGISTRATION AND REGULATION) ACT, 2010 (ACT NO. 23 OF 2010) (5) THE LAND PORTS AUTHORITY OF INDIA ACT, 2010 (ACT NO. 31 OF 2010) (6) THE CENTRAL EDUCATIONAL INSTITUTIONS (RESERVATION IN TEACHERS' CADRE) ACT, 2019 (ACT NO. 10 OF 2019) (7) THE MUSLIM WOMEN (PROTECTION OF RIGHTS ON MARRIAGE) ACT, 2019 (ACT NO. 20 OF 2019) -are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಪಾಸ್‌ಪೋರ್ಟ್ (ಭಾರತದೊಳಕ್ಕೆ ಪ್ರವೇಶ) ಅಧಿನಿಯಮ, 1920 (1920ರ ಅಧಿನಿಯಮ ಸಂಖ್ಯೆ 34) (2) ಪಶು ಸೋಂಕು ರೋಗಗಳ ಮತ್ತು ಸಾಂಕ್ರಾಮಿಕ ರೋಗಗಳ ಪ್ರತಿಬಂಧ ಮತ್ತು ನಿಯಂತ್ರಣ ಅಧಿನಿಯಮ, 2009 (2009 ರ ಅಧಿನಿಯಮ ಸಂಖ್ಯೆ 27) (3) ಕಾನೂನು ಮಾಪನ ವಿಜ್ಞಾನ ಅಧಿನಿಯಮ, 2009 (2010ರ ಅಧಿನಿಯಮ ಸಂಖ್ಯೆ 1) (4) ಚಿಕಿತ್ಸಾ ಕಾರ್ಯಸಂಸ್ಥೆಗಳ (ನೋಂದಣಿ ಮತ್ತು ವಿನಿಯಮ) ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 23) (5) ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 (2010ರ ಅಧಿನಿಯಮ ಸಂಖ್ಯೆ 31) (6) ಕೇಂದ್ರೀಯ ಶೈಕ್ಷಣಿಕ ಸಂಸ್ಥೆಗಳ (ಶಿಕ್ಷಕ ವೃಂದದಲ್ಲಿ ಮೀಸಲಾತಿ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 10) (7) ಮುಸ್ಲಿಂ ಮಹಿಳೆಯರ (ವಿವಾಹದ ಹಕ್ಕುಗಳ ಸಂರಕ್ಷಣೆ) ಅಧಿನಿಯಮ, 2019 (2019 ರ ಅಧಿನಿಯಮ ಸಂಖ್ಯೆ 20) – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010

## (2010ರ ಅಧಿನಿಯಮ ಸಂಖ್ಯೆ 31)

[31ನೇ ಆಗಸ್ಟ್, 2010.]

ಭಾರತದ ಅಂತರರಾಷ್ಟ್ರೀಯ ಗಡಿಗಳುದ್ದಕ್ಕೂ ನಿರ್ದಿಷ್ಟಪಡಿಸಿದ ಸ್ಥಳಗಳಲ್ಲಿ ಭದ್ರತಾ ಅಗತ್ಯತೆಗಳನ್ನು ಪೂರೈಸುವಂಥ ವ್ಯವಸ್ಥೆಗಳನ್ನು ಕಲ್ಪಿಸಲು ಭೂ ಬಂದರುಗಳ ಪ್ರಾಧಿಕಾರವನ್ನು ಸ್ಥಾಪನೆ ಮಾಡುವುದಕ್ಕೆ ಮತ್ತು ಪ್ರಯಾಣಿಕರನ್ನು ಹಾಗೂ ಸರಕುಗಳನ್ನು ಗಡಿಯಿಂದಾಚೆಗೆ ಸಾಗಿಸುವುದಕ್ಕಾಗಿ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಮತ್ತು ನಿರ್ವಹಣೆ ಮಾಡಲು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸಲು ಅಧಿನಿಯಮ.

ಇದು ಭಾರತ ಗಣರಾಜ್ಯದ ಅರವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಭಾರತ ಭೂ ಬಂದರುಗಳ ಪ್ರಾಧಿಕಾರ ಅಧಿನಿಯಮ, 2010 ಎಂದು ಕರೆಯತಕ್ಕದ್ದು.

(2) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂತಹ *ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ, ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ಅಂತಹ ಉಪಬಂಧದಲ್ಲಿರುವ ಯಾವುದೇ ಉಲ್ಲೇಖವನ್ನು ಆ ಉಪಬಂಧವನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಮೇರೆಗೆ ರಚಿಸಿದ ಭಾರತ ಭೂ ಬಂದರುಗಳ ಪ್ರಾಧಿಕಾರ;

(ಬಿ) "ಅಧ್ಯಕ್ಷ" ಎಂದರೆ, 3ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ಅಧ್ಯಕ್ಷ;

(ಸಿ) "ವಲಸೆ ತನಿಖಾ ಠಾಣೆ" ಎಂದರೆ, ವಿದೇಶೀಯರ ಅಧಿನಿಯಮ, 1946 (1946 ರ 31) ರ ಮೇರೆಗೆ ಅಧಿಸೂಚಿಸಿದಂಥ ಭೂಮಿಯ ಮೇಲಿರುವ ಯಾವುದೇ ಬಂದರು ಅಥವಾ ನಿರ್ಗಮನ ಸ್ಥಳ;

(ಡಿ) "ಸಂಯೋಜಿತ ತನಿಖಾ ಠಾಣೆ" ಎಂದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದ ಯಾವುದೇ ಭೂ ಬಂದರು;

(ಇ) "ಭೂ ಸೀಮಾಸುಂಕ ಕೇಂದ್ರ" ಎಂದರೆ, ಭೂ ಮಾರ್ಗದ ಮೂಲಕ ಅಥವಾ ಒಳನಾಡು ಜಲಮಾರ್ಗದ ಮೂಲಕ ಆಮದು ಮಾಡಿಕೊಂಡ ಅಥವಾ ರಫ್ತು ಮಾಡುವಂಥ ಸರಕುಗಳನ್ನು ತೆರವುಗೊಳಿಸುವುದಕ್ಕಾಗಿ ಸೀಮಾಸುಂಕ ಅಧಿನಿಯಮ, 1962 (1962 ರ 52)ರ 7ನೇ ಪ್ರಕರಣದ (1)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕೇಂದ್ರ ಸರ್ಕಾರವು ಭೂ ಸೀಮಾಸುಂಕ ಕೇಂದ್ರ ಎಂದು ಅಧಿಸೂಚಿಸಲಾದಂಥ ಯಾವುದೇ ಸ್ಥಳ;

(ಎಫ್) "ಭೂ ಬಂದರು" ಎಂದರೆ, ಸೀಮಾಸುಂಕ ಅಧಿನಿಯಮ, 1962 (1962 ರ 52)ರ ಅಥವಾ ವಿದೇಶೀಯರ ಅಧಿನಿಯಮ, 1946 (1946 ರ 31)ರ ಮೇರೆಗೆ ಭೂ ಸೀಮಾಸುಂಕ ಕೇಂದ್ರವೆಂದು ಅಥವಾ ವಲಸೆ ತನಿಖಾ ಠಾಣೆ ಎಂದು ಅಧಿಸೂಚಿಸಿದಂಥ, ರಾಷ್ಟ್ರೀಯ ಹೆದ್ದಾರಿಗಳ, ರಾಜ್ಯ ಹೆದ್ದಾರಿಗಳ ಮತ್ತು ಇತರ ರಸ್ತೆಗಳ ಭಾಗಗಳೂ ಸೇರಿದಂತೆ,

---

*ಮಾರ್ಚ್ 01, 2012 ರಂದು ಜಾರಿಗೆ ಬಂದಿದೆ: ಅಧಿಸೂಚನೆ ಸಂಖ್ಯೆ ಎಸ್.ಓ 328 (ಇ), ದಿನಾಂಕ: 24-02-2012 ರ ಭಾರತ ವಿಶೇಷ ರಾಜಪತ್ರ, ಭಾಗ-II, ವಿಭಾಗ 3 (ii) ನೋಡಿ.

ಭಾರತದ ಅಂತರರಾಷ್ಟ್ರೀಯ ಗಡಿಗಳಲ್ಲಿನ ಪ್ರದೇಶ; ಮತ್ತು ಭಾರತದ ಗಡಿಗಳುದ್ದಕ್ಕೂ ಪ್ರಯಾಣಿಕರನ್ನು ಮತ್ತು ಸರಕುಗಳನ್ನು ತೆರವುಗೊಳಿಸುವುದಕ್ಕಾಗಿ ಸೌಲಭ್ಯಗಳು ಇರುವಂಥ ರೈಲ್ವೆಯು ಒಳಗೊಳ್ಳುತ್ತದೆ;

(ಜಿ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಎಚ್) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು; ಮತ್ತು

(ಐ) "ವಿನಿಯಮಗಳು" ಎಂದರೆ, ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ರಚಿಸಿದ ವಿನಿಯಮಗಳು.

## ಅಧ್ಯಾಯ II

## ಭಾರತ ಭೂ ಬಂದರುಗಳ ಪ್ರಾಧಿಕಾರ

3. **ಪ್ರಾಧಿಕಾರದ ರಚನೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಭಾರತ ಭೂ ಬಂದರುಗಳ ಪ್ರಾಧಿಕಾರ ಎಂಬ ಹೆಸರಿನ ಪ್ರಾಧಿಕಾರವನ್ನು ರಚಿಸತಕ್ಕದ್ದು.

(2) ಪ್ರಾಧಿಕಾರವು ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚರ ಮತ್ತು ಸ್ಥಿರ ಎರಡೂ ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಹಾಗೂ ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರುವ ಮೇಲ್ಕಂಡ ಹೆಸರಿನ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು–

(ಎ) ಅಧ್ಯಕ್ಷ;

(ಬಿ) ಇಬ್ಬರು ಸದಸ್ಯರು ಅವರಲ್ಲಿ ಒಬ್ಬ ಸದಸ್ಯ (ಯೋಜನೆ ಮತ್ತು ಅಭಿವೃದ್ಧಿ), ಮತ್ತೊಬ್ಬ ಸದಸ್ಯ (ಹಣಕಾಸು) ಆಗಿರತಕ್ಕದ್ದು;

(ಸಿ) ಒಳಾಡಳಿತ ವ್ಯವಹಾರಗಳು, ವಿದೇಶ ವ್ಯವಹಾರಗಳು, ರಾಜಸ್ವ, ವಾಣಿಜ್ಯ, ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು, ರೈಲ್ವೆ, ರಕ್ಷಣೆ, ಕೃಷಿ ಮತ್ತು ಸಹಕಾರ, ಕಾನೂನು ಮತ್ತು ನ್ಯಾಯ ಇವುಗಳನ್ನು ನೋಡಿಕೊಳ್ಳುವ ಭಾರತ ಸರ್ಕಾರದ ಮಂತ್ರಾಲಯಗಳನ್ನು ಅಥವಾ ಇಲಾಖೆಗಳನ್ನು ಪ್ರತಿನಿಧಿಸುವ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳ ಪೈಕಿಯಿಂದ ಕೇಂದ್ರ ಸರ್ಕಾರವು ನೇಮಕ ಮಾಡುವಂಥ ಒಂಭತ್ತಕ್ಕಿಂತ ಹೆಚ್ಚಲ್ಲದ ಪದನಿಮಿತ್ತ ಸದಸ್ಯರು;

(ಡಿ) ಸಂಯೋಜಿತ ತನಿಖಾ ಠಾಣೆಗಳು ಯಾವ ರಾಜ್ಯದಲ್ಲಿದೆಯೊ ಆ ಸಂಬಂಧಪಟ್ಟ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತ ಅಧಿಕಾರಿ;

(ಇ) ಇಬ್ಬರು ಪ್ರತಿನಿಧಿಗಳು, ಅವರಲ್ಲಿ ಒಬ್ಬನನ್ನು ಮಾನ್ಯತೆ ಪಡೆದ ಕಾರ್ಮಿಕರ ಸಂಸ್ಥೆಗಳಿಂದ ಮತ್ತೊಬ್ಬನನ್ನು ವ್ಯಾಪಾರಿಗಳ ಪೈಕಿ ಕೇಂದ್ರ ಸರ್ಕಾರವು ನೇಮಕ ಮಾಡತಕ್ಕ ಒಬ್ಬ ವ್ಯಕ್ತಿ; ಮತ್ತು

(ಎಫ್) ಕೇಂದ್ರ ಸರ್ಕಾರವು ಕಾರ್ಯನಿರ್ವಹಣೆಯ ಉದ್ದೇಶಗಳಿಗಾಗಿ ಸಹ–ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದಾದಂಥ ಇತರ ಪ್ರತಿನಿಧಿಗಳು.

(4) ಖಂಡ (ಬಿ)ಯಲ್ಲಿ ಉಲ್ಲೇಖಿಸಿದ ಅಧ್ಯಕ್ಷನನ್ನು ಮತ್ತು ಸದಸ್ಯರನ್ನು ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು ಮತ್ತು ಅವರು ಪೂರ್ಣಕಾಲಿಕ ಸದಸ್ಯರಾಗಿರತಕ್ಕದ್ದು.

(5) ಅಧ್ಯಕ್ಷನನ್ನು ಭದ್ರತೆ, ಸಾರಿಗೆ, ಕೈಗಾರಿಕೆ, ವಾಣಿಜ್ಯ, ಕಾನೂನು, ಹಣಕಾಸು ಅಥವಾ ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ವಿಶೇಷ ಜ್ಞಾನವನ್ನು ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ಆಯ್ಕೆ ಮಾಡತಕ್ಕದ್ದು.

4. **ಸದಸ್ಯ ಪದಕ್ಕೆ ಅನರ್ಹತೆಗಳು.–** ಒಬ್ಬ ವ್ಯಕ್ತಿಯು–

(ಎ) ನೈತಿಕ ಅಧಃಪತನವನ್ನು ಒಳಗೊಂಡ ಅಪರಾಧವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವಂಥ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಕಾರಾವಾಸ ಶಿಕ್ಷೆಗೆ ಗುರಿಯಾಗಿದ್ದರೆ; ಅಥವಾ

(ಬಿ) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(ಸಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆ ಘೋಷಿಸಿದ್ದರೆ; ಅಥವಾ

(ಡಿ) ಆತನನ್ನು ಸರ್ಕಾರದ ಅಥವಾ ಸರ್ಕಾರದ ಒಡೆತನಕ್ಕೆ ಅಥವಾ ನಿಯಂತ್ರಣಕ್ಕೆ ಒಳಪಟ್ಟ ಒಂದು ನಿಗಮಿತ ನಿಕಾಯದ ಸೇವೆಯಿಂದ ತೆಗೆದುಹಾಕಿದ್ದರೆ ಅಥವಾ ವಜಾಗೊಳಿಸಿದ್ದರೆ; ಅಥವಾ

(ಇ) ಸದಸ್ಯನಾಗಿ ಅವನ ಪ್ರಕಾರ್ಯಗಳ ನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮಬೀರುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಗಳನ್ನು ಪ್ರಾಧಿಕಾರದಲ್ಲಿ ಹೊಂದಿದ್ದಾನೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ

– ಸದಸ್ಯನಾಗಿ ನೇಮಕಗೊಳ್ಳಲು ಅನರ್ಹನಾಗಿರತಕ್ಕದ್ದು.

5. **ಸದಸ್ಯರುಗಳ ಪದಾವಧಿ ಮತ್ತು ಸೇವೆಯ ಷರತ್ತುಗಳು.–** (1) ಪ್ರಕರಣ 6ರ ಉಪಬಂಧಗಳಿಗೊಳಪಟ್ಟು, ಪ್ರತಿಯೊಬ್ಬ ಪೂರ್ಣಕಾಲಿಕ ಸದಸ್ಯನು ಆತನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಗೆ ಅಥವಾ ಅವನಿಗೆ ಅರವತ್ತು ವರ್ಷ ತುಂಬುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದವನ್ನು ಧಾರಣ ಮಾಡತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು–

(ಎ) ಯಾರೇ ಪೂರ್ಣಕಾಲಿಕ ಸದಸ್ಯನ ನೇಮಕವನ್ನು ಆತನಿಗೆ ಮೂರು ತಿಂಗಳಿಗಿಂತ ಕಡಿಮೆಯಲ್ಲದ ಅವಧಿಯ ನೋಟೀಸನ್ನು ನೀಡಿದ ತರುವಾಯ ಅಥವಾ ಅದಕ್ಕೆ ಬದಲಾಗಿ ಮೂರು ತಿಂಗಳ ಅವಧಿಯ ಆತನ ಸಂಬಳ ಮತ್ತು ಭತ್ಯೆಗಳು ಯಾವುದಾದರೂ ಇದ್ದರೆ, ಅವುಗಳಿಗೆ ಸಮನಾದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಕೊನೆಗೊಳಿಸಬಹುದು;

(ಬಿ) ಸರ್ಕಾರದ ನೌಕರನಾಗಿರುವ ಯಾರೇ ಸದಸ್ಯನ ನೇಮಕವನ್ನು ಯಾವುದೇ ಕಾಲದಲ್ಲಿ ಕೊನೆಗೊಳಿಸಬಹುದು.

(2) ಸದಸ್ಯರ ಸೇವೆಯ ಇತರ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಯಾರೇ ಸದಸ್ಯನು ನಿಯಮಿಸಬಹುದಾದಂಥ ಅವಧಿಗೆ ಲಿಖಿತದಲ್ಲಿ ಕೇಂದ್ರ ಸರ್ಕಾರಕ್ಕೆ ನೋಟೀಸನ್ನು ನೀಡುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಂಥ ರಾಜೀನಾಮೆಯನ್ನು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಿದ ಮೇಲೆ ಅಂಥ ಸದಸ್ಯನು ತನ್ನ ಪದವನ್ನು ಖಾಲಿ ಮಾಡಿದ್ದಾನೆಂದು ಭಾವಿಸತಕ್ಕದ್ದು.

6. **ಸದಸ್ಯರನ್ನು ಪದದಿಂದ ತೆಗೆದುಹಾಕುವುದು.–** ಕೇಂದ್ರ ಸರ್ಕಾರವು, ಸದಸ್ಯನನ್ನು–

(ಎ) ಅವನು 4ನೇ ಪ್ರಕರಣದಲ್ಲಿ ತಿಳಿಸಿರುವ ಯಾವುದೇ ಅನರ್ಹತೆಗಳಿಗೆ ಒಳಗಾದರೆ:

ಪರಂತು, ಯಾರೇ ಸದಸ್ಯನಿಗೆ ಆ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು, ಆ ಪ್ರಕರಣದ (ಇ) ಖಂಡದಲ್ಲಿ ತಿಳಿಸಿರುವ ಅನರ್ಹತೆಗೆ ಅವನು ಒಳಗಾಗಿದ್ದಾನೆ ಎಂಬ ಕಾರಣದ ಮೇಲೆ ಅವನನ್ನು ತೆಗೆದುಹಾಕತಕ್ಕದ್ದಲ್ಲ; ಅಥವಾ

(ಬಿ) ಅವನು ಕಾರ್ಯನಿರ್ವಹಿಸಲು ನಿರಾಕರಿಸಿದರೆ ಅಥವಾ ಕಾರ್ಯನಿರ್ವಹಿಸಲು ಅಸಮರ್ಥನಾದರೆ; ಅಥವಾ

(ಸಿ) ಅವನು ಪ್ರಾಧಿಕಾರದಿಂದ ಅನುಮತಿ ಪಡೆಯದೆ ಪ್ರಾಧಿಕಾರದ ಮೂರು ನಿರಂತರ ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಡಿ) ಅವನು ತನ್ನ ಪದದಲ್ಲಿ ಮುಂದುವರೆದರೆ, ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುತ್ತದೆ ಎಂಬುವಷ್ಟರ ಮಟ್ಟಿಗೆ ಅವನು ತನ್ನ ಪದವನ್ನು ದುರುಪಯೋಗಪಡಿಸಿಕೊಂಡಿದ್ದಾನೆ ಎಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟರೆ

– ಪದದಿಂದ ತೆಗೆದುಹಾಕತಕ್ಕದ್ದು:

ಪರಂತು, ಯಾರೇ ಸದಸ್ಯನಿಗೆ ಈ ವಿಷಯದ ಬಗ್ಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು ಅವನನ್ನು ಈ ಖಂಡದ ಮೇರೆಗೆ ಪದದಿಂದ ತೆಗೆದುಹಾಕತಕ್ಕದ್ದಲ್ಲ.

7. **ಮರುನೇಮಕಕ್ಕೆ ಸದಸ್ಯನ ಅರ್ಹತೆ.–** ಯಾವ ವ್ಯಕ್ತಿಯು ಸದಸ್ಯನಾಗಿರುವುದು ನಿಂತು ಹೋಗಿದೆಯೋ ಆ ಯಾರೇ ವ್ಯಕ್ತಿಯು, 4ನೇ ಪ್ರಕರಣದ ಮೇರೆಗೆ ಅನರ್ಹಗೊಂಡಿದ್ದ ಹೊರತು ಮರು ನೇಮಕಕ್ಕೆ ಅರ್ಹನಾಗಿರತಕ್ಕದ್ದು.

8. **ಸಭೆಗಳು.–** (1) ಪ್ರಾಧಿಕಾರವು, ವಿನಿಯಮಗಳ ಮೂಲಕ ಗೊತ್ತುಪಡಿಸಬಹುದಾದಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ (ಅಂತಹ ಸಭೆಗಳಲ್ಲಿನ ಕೋರಂ ಸೇರಿದಂತೆ) ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಅಂಥ ಕಾರ್ಯವಿಧಾನದ ನಿಯಮಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು ಅಥವಾ ಯಾವುದೇ ಕಾರಣದಿಂದಾಗಿ ಪ್ರಾಧಿಕಾರದ ಯಾವುದೇ ಸಭೆಗೆ ಹಾಜರಾಗಲು ಅವನಿಗೆ ಸಾಧ್ಯವಾಗದಿದ್ದರೆ, ಪ್ರಾಧಿಕಾರದ ಸಭೆಯಲ್ಲಿ ಹಾಜರಿರುವ ಸದಸ್ಯರಿಂದ ಆಯ್ಕೆಯಾದಂಥ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ವಿಷಯಗಳನ್ನು ಹಾಜರಿರುವ ಮತ್ತು ಮತ ನೀಡುವ ಸದಸ್ಯರ ಬಹುಮತದಿಂದ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮನಾಗಿ ಬಿದ್ದ ಸಂದರ್ಭದಲ್ಲಿ, ಅಧ್ಯಕ್ಷನು ಅಥವಾ ಅವನ ಅನುಪಸ್ಥಿತಿಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಎರಡನೆಯ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಚಲಾಯಿಸತಕ್ಕದ್ದು.

9. **ಖಾಲಿಸ್ಥಾನ ಇತ್ಯಾದಿಗಳು ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಪ್ರಾಧಿಕಾರದ ಯಾವುದೇ ಕಾರ್ಯವು ಅಥವಾ ವ್ಯವಹರಣೆಯು–

(ಎ) ಪ್ರಾಧಿಕಾರದಲ್ಲಿ ಯಾವುದೇ ಸ್ಥಾನವು ಖಾಲಿಯಿರುವ ಅಥವಾ ಅದರ ರಚನೆಯಲ್ಲಿ ಯಾವುದೇ ದೋಷವಿರುವ; ಅಥವಾ

(ಬಿ) ಪ್ರಾಧಿಕಾರದ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿ ಯಾವುದೇ ಲೋಪವಿರುವ; ಅಥವಾ

(ಸಿ) ಪ್ರಾಧಿಕಾರದ ಕಾರ್ಯವಿಧಾನದಲ್ಲಿ ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಯಾವುದೇ ಅಕ್ರಮತೆ ಇರುವ

– ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

10. **ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರರು.–** (1) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸುವುದಕ್ಕೆ ಪ್ರಾಧಿಕಾರಕ್ಕೆ ಸಾಧ್ಯವಾಗಿಸುವ ಉದ್ದೇಶಕ್ಕಾಗಿ, ತಾನು ಅವಶ್ಯವೆಂದು ಪರಿಗಣಿಸುವಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಪ್ರಾಧಿಕಾರವು ನೇಮಕ ಮಾಡಿಕೊಳ್ಳತಕ್ಕದ್ದು:

ಪರಂತು, ನಿರ್ದಿಷ್ಟಪಡಿಸಬಹುದಾದಂಥ ಪ್ರವರ್ಗದ ಅಧಿಕಾರಿಗಳ ನೇಮಕವು ಕೇಂದ್ರ ಸರ್ಕಾರದ ಅನುಮೋದನೆಗೊಳಪಟ್ಟಿರತಕ್ಕದ್ದು.

(2) ಪ್ರಾಧಿಕಾರದಿಂದ ನೇಮಕಗೊಂಡ ಪ್ರತಿಯೊಬ್ಬ ಅಧಿಕಾರಿಯು ಅಥವಾ ಇತರ ನೌಕರನು, ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂಥ ಸೇವೆಯ ಷರತ್ತುಗಳಿಗೊಳಪಟ್ಟಿರತಕ್ಕದ್ದು ಮತ್ತು ಅಂಥ ಪರಿಶ್ರಮಧನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

## ಅಧ್ಯಾಯ III

## ಪ್ರಾಧಿಕಾರದ ಪ್ರಕಾರ್ಯಗಳು

**11. ಪ್ರಾಧಿಕಾರದ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಭಾರತದ ಅಂತರರಾಷ್ಟ್ರೀಯ ಗಡಿಗಳುದ್ದಕ್ಕೂ ಹೆಸರಿಸಲಾದ ಸ್ಥಳಗಳಲ್ಲಿ ಪ್ರಯಾಣಿಕರನ್ನು ಮತ್ತು ಸರಕುಗಳನ್ನು ಗಡಿಯಿಂದಾಚೆಗೆ ಸಾಗಿಸುವುದಕ್ಕೆ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು, ನೈರ್ಮಲ್ಯ ವ್ಯವಸ್ಥೆ ಕಲ್ಪಿಸಲು ಮತ್ತು ನಿರ್ವಹಣೆ ಮಾಡಲು ಪ್ರಾಧಿಕಾರವು ಅಧಿಕಾರವನ್ನು ಹೊಂದಿರತಕ್ಕದ್ದು.

(2) ಉಪಪ್ರಕರಣ (1)ರಲ್ಲಿ ಒಳಗೊಂಡ ಉಪಬಂಧಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಪ್ರಾಧಿಕಾರವು–

(ಎ) ಗಡಿಭಾಗಗಳಲ್ಲಿರುವ ಸಂಯೋಜಿತ ತನಿಖಾ ಕಟ್ಟೆಗಳಲ್ಲಿ ಭದ್ರತಾ ಅಗತ್ಯತೆಗಳನ್ನು ಪೂರೈಸುವ ವ್ಯವಸ್ಥೆಗಳನ್ನು ಕಲ್ಪಿಸಬಹುದು;

(ಬಿ) ಸಂಯೋಜಿತ ತನಿಖಾ ಠಾಣೆಗಳಲ್ಲಿ, ರಾಷ್ಟ್ರೀಯ ಹೆದ್ದಾರಿಗಳು, ರಾಜ್ಯ ಹೆದ್ದಾರಿಗಳು ಮತ್ತು ರೈಲ್ವೆಯನ್ನು ಹೊರತುಪಡಿಸಿ ರಸ್ತೆಗಳನ್ನು ಮತ್ತು ಟರ್ಮಿನಲ್‌ಗಳನ್ನು ಮತ್ತು ಪೂರಕ ಕಟ್ಟಡಗಳನ್ನು ಯೋಜಿಸಬಹುದು, ನಿರ್ಮಿಸಬಹುದು ಮತ್ತು ನಿರ್ವಹಿಸಬಹುದು;

(ಸಿ) ಸಂಯೋಜಿತ ತನಿಖಾ ಠಾಣೆಗಳಲ್ಲಿ ಸಂಪರ್ಕ ವ್ಯವಸ್ಥೆಯನ್ನು, ಭದ್ರತೆಯನ್ನು, ಸರಕುಗಳ ನಿರ್ವಹಣೆಯನ್ನು ಮತ್ತು ಸ್ಕ್ಯಾನಿಂಗ್ ಸಾಧನ ಸಲಕರಣೆಗಳನ್ನು ಯೋಜಿಸಬಹುದು, ಸಂಗ್ರಹಿಸಬಹುದು, ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು;

(ಡಿ) ವಲಸೆಗಾಗಿ, ಸೀಮಾಸುಂಕಕ್ಕಾಗಿ, ಭದ್ರತೆಗಾಗಿ, ತೆರಿಗೆ ಪ್ರಾಧಿಕಾರಗಳಿಗಾಗಿ, ಪ್ರಾಣಿ ಮತ್ತು ಸಸ್ಯಗಳನ್ನು ಬೇರ್ಪಡಿಸಿಡುವುದಕ್ಕಾಗಿ, ಉಗ್ರಾಣಗಳಿಗಾಗಿ, ಸರಕು ಮತ್ತು ಸಾಮಾನುಗಳಿಗಾಗಿ, ಪರೀಕ್ಷಾ ಪ್ರಾಂಗಣಗಳಿಗಾಗಿ, ಪಾರ್ಕಿಂಗ್ ವಲಯಗಳಿಗಾಗಿ, ಬ್ಯಾಂಕುಗಳಿಗಾಗಿ, ಅಂಚೆ ಕಚೇರಿಗಳಿಗಾಗಿ, ಸಂಪರ್ಕ ಸೌಲಭ್ಯಗಳಿಗಾಗಿ, ಪ್ರವಾಸಿ ಮಾಹಿತಿ ಕೇಂದ್ರಗಳಿಗಾಗಿ, ನಿರೀಕ್ಷಣಾ ಸಭಾಂಗಣಗಳಿಗಾಗಿ, ಕ್ಯಾಂಟೀನ್‌ಗಾಗಿ, ಉಪಾಹಾರ ಮಳಿಗೆಗಳಿಗಾಗಿ, ಸಾರ್ವಜನಿಕ ಅನುಕೂಲತೆಗಳಿಗಾಗಿ, ಆರೋಗ್ಯ ಸೇವೆಗಳಿಗಾಗಿ ಮತ್ತು ಅವಶ್ಯವೆಂದು ಭಾವಿಸಬಹುದಾದ ಅಂಥ ಇತರ ಸೇವೆಗಳಿಗಾಗಿ ಸೂಕ್ತ ಸ್ಥಳವನ್ನು ಮತ್ತು ಸೌಕರ್ಯಗಳನ್ನು ಒದಗಿಸಬಹುದು;

(ಇ) ಅದರ ನೌಕರರಿಗೆ ನಿವಾಸದ ಕಟ್ಟಡಗಳನ್ನು ಹಾಗೂ ಸಂಯೋಜಿತ ತನಿಖಾ ಕಟ್ಟೆಯಲ್ಲಿ ನಿಯೋಜಿತರಾದ ಸಿಬ್ಬಂದಿಗೆ ವಸತಿ ಸೌಕರ್ಯಗಳನ್ನು ನಿರ್ಮಿಸಬಹುದು;

(ಎಫ್) ಹೋಟೆಲುಗಳನ್ನು, ರೆಸ್ಟೋರೆಂಟ್‌ಗಳನ್ನು ಮತ್ತು ವಿಶ್ರಾಂತಿ ಗೃಹಗಳನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು;

(ಜಿ) ಸರಕುಗಳನ್ನು ದಾಸ್ತಾನು ಮಾಡಲು ಅಥವಾ ಸಂಸ್ಕರಿಸಲು ಉಗ್ರಾಣಗಳನ್ನು, ಕಂಟೈನರ್ ಡಿಪೋಗಳನ್ನು ಮತ್ತು ಕಾರ್ಗೋ ಕಾಂಪ್ಲೆಕ್ಸ್‌ಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಎಚ್) ಸಂಯೋಜಿತ ತನಿಖಾ ಠಾಣೆಗಳಲ್ಲಿ ಪ್ರಯಾಣಿಕರ ಮತ್ತು ಇತರ ವ್ಯಕ್ತಿಗಳ ಉಪಯೋಗಕ್ಕಾಗಿ ಅಂಚೆ, ಹಣ ವಿನಿಮಯ, ವಿಮಾ ಮತ್ತು ದೂರವಾಣಿ ಸೌಕರ್ಯಗಳಿಗೆ ವ್ಯವಸ್ಥೆ ಮಾಡಬಹುದು;

(ಐ) ಸಂಯೋಜಿತ ತನಿಖಾ ಠಾಣೆಗಳ ಭದ್ರತೆಗಾಗಿ ಸೂಕ್ತ ವ್ಯವಸ್ಥೆಗಳನ್ನು ಮಾಡಬಹುದು ವಾಹನಗಳ ಸಂಚಾರವನ್ನು ವಿನಿಯಮಿಸುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಮತ್ತು ಪ್ರಯಾಣಿಕರ ಮತ್ತು ಸರಕುಗಳ ಆಗಮನ ಮತ್ತು ನಿರ್ಗಮನಕ್ಕೆ ಸಂಬಂಧಿಸಿದ ಕಾನೂನಿಗನುಸಾರವಾಗಿ ಅವಕಾಶ ಕಲ್ಪಿಸಬಹುದು;

(ಜೆ) ಬೆಂಕಿ ಮತ್ತು ಇತರ ಅಪಾಯಗಳನ್ನು ತಡೆಗಟ್ಟುವುದನ್ನು ಮತ್ತು ನಿಯಂತ್ರಿಸುವುದನ್ನು ಮತ್ತು ಅವಶ್ಯವೆಂದು ಭಾವಿಸಬಹುದಾದ ಇತರ ಸೌಲಭ್ಯಗಳು ಇರುವುದನ್ನು ಸುನಿಶ್ಚಿತಪಡಿಸಿಕೊಳ್ಳಬಹುದು;

(ಕೆ) ಕಾನೂನಿಗೆ ಮತ್ತು ಭದ್ರತೆಗೆ ಮತ್ತು ಭಾರತ ಸರ್ಕಾರದ ಶಿಷ್ಟಾಚಾರಕ್ಕೆ ಸೂಕ್ತ ಗಮನ ಕೊಡುವುದರೊಂದಿಗೆ ಸಂಯೋಜಿತ ತನಿಖಾ ಠಾಣೆಗಳಲ್ಲಿ ವಾಹನಗಳ ಸಂಚಾರವನ್ನು, ಪ್ರಯಾಣಿಕರ, ಸಾಗಾಣೆ ಕೆಲಸಗಾರರ, ನಿರ್ವಹಣಾ ಏಜೆಂಟರುಗಳ, ಸರಕುಗಳನ್ನು ತೆಗೆದು ಸಾಗಿಸುವ ಏಜೆಂಟರುಗಳ ಮತ್ತು ಸರಕುಗಳ ಆಗಮನ ಮತ್ತು ನಿರ್ಗಮನವನ್ನು ವಿನಿಯಮಿಸಬಹುದು ಮತ್ತು ನಿಯಂತ್ರಿಸಬಹುದು;

(ಎಲ್) ತತ್ಕಾಲದಲ್ಲಿ ಜಾರಿಯಲ್ಲಿರುವ ಸಂಬಂಧಪಟ್ಟ ಕಾನೂನಿಗನುಸಾರವಾಗಿ, ಸಂಯೋಜಿತ ತನಿಖಾ ಠಾಣೆಗಳಲ್ಲಿ ವಿವಿಧ ಚಟುವಟಿಕೆಗಳಲ್ಲಿ ತೊಡಗಿರುವ ಕಾರ್ಯನಿರತ ಏಜೆನ್ಸಿಗಳ ಕಾರ್ಯನಿರ್ವಹಣೆಯಲ್ಲಿ ಸಮನ್ವಯ ತರಬಹುದು ಮತ್ತು ಆ ಕಾರ್ಯನಿರ್ವಹಣೆಗೆ ಅನುಕೂಲ ಮಾಡಿಕೊಡಬಹುದು;

(ಎಂ) ಸಂಯೋಜಿತ ತನಿಖಾ ಠಾಣೆಗಳಿಗೆ ಸಂಬಂಧಿಸಿದಂತೆ ಭಾರತದಲ್ಲಿ ಮತ್ತು ಹೊರಗೆ ಸಮಾಲೋಚನೆ, ನಿರ್ಮಾಣ ಅಥವಾ ನಿರ್ವಹಣಾ ಸೇವೆಗಳನ್ನು ಅಭಿವೃದ್ಧಿಪಡಿಸಬಹುದು ಮತ್ತು ಒದಗಿಸಬಹುದು ಮತ್ತು ಕಾರ್ಯಾಚರಣೆಗಳನ್ನು ಕೈಗೊಳ್ಳಬಹುದು;

(ಎನ್) ಈ ಅಧಿನಿಯಮದ ಮೂಲಕ ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕಾಗಿ, ಕಂಪನಿಗಳ ಅಧಿನಿಯಮ 1956 (1956 ರ 1)ರ ಮೇರೆಗೆ ಅಥವಾ ಕಂಪನಿಗಳಿಗೆ ಸಂಬಂಧಿಸಿದ ಯಾವುದೇ ಇತರ ಕಾನೂನಿನ ಮೇರೆಗೆ ಒಂದು ಅಥವಾ ಹೆಚ್ಚು ಕಂಪನಿಗಳನ್ನು ರಚಿಸಬಹುದು;

(ಓ) ಈ ಅಧಿನಿಯಮದ ಮೂಲಕ ಅದಕ್ಕೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಅದಕ್ಕೆ ವಹಿಸಿದ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಅವಶ್ಯವಾಗಬಹುದಾದಂಥ ಅಥವಾ ವಿಹಿತವಾಗಬಹುದಾದಂಥ ಅಥವಾ ಅದಕ್ಕೆ ಪ್ರಾಸಂಗಿಕವಾಗಬಹುದಂಥ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬಹುದು:

ಪರಂತು, ಪ್ರಾಧಿಕಾರಕ್ಕೆ ಇರುವ ಸಾರ್ವಭೌಮ ಪ್ರಕಾರ್ಯಗಳನ್ನು ಯಾವುದೇ ಖಾಸಗಿ ಸಂಸ್ಥೆಗೆ ವಹಿಸಿಕೊಡತಕ್ಕದ್ದಲ್ಲ;

(ಪಿ) ಪ್ರಾಧಿಕಾರಕ್ಕೆ ವಹಿಸಿರುವ ಯಾವುವೇ ಪ್ರಕಾರ್ಯಗಳ ನಿರ್ವಹಣೆಗಾಗಿ ಜಂಟಿ ಉದ್ಯಮಗಳನ್ನು ಸ್ಥಾಪಿಸಬಹುದು; ಮತ್ತು

(ಕ್ಯೂ) ಪ್ರಾಧಿಕಾರದ ಅತ್ಯುತ್ತಮ ನಾಲ್ಕು ವಾಣಿಜ್ಯ ಹಿತಾಸಕ್ತಿಗಳಿಗೆ ಸಂಬಂಧಿಸಿದಂತೆ ಯಾವುದೇ ಇತರ ಚಟುವಟಿಕೆಯನ್ನು ಸಂಯೋಜಿತ ತನಿಖಾ ಠಾಣೆಗಳಲ್ಲಿ ಕೈಗೊಳ್ಳಬಹುದು.

(3) ಈ ಪ್ರಕರಣದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಅವಶ್ಯವೆಂದು ತಾನು ಭಾವಿಸಬಹುದಾದಂಥ, ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಮಂತ್ರಾಲಯದೊಂದಿಗೆ, ಇಲಾಖೆಯೊಂದಿಗೆ ಸಮಾಲೋಚಿಸಬಹುದು ಮತ್ತು ಭೂ ಬಂದರು ಸೇವೆಗಳ ಅಭಿವೃದ್ಧಿಗೆ ಮತ್ತು ಅಂಥ ಸೇವೆಗಳ ದಕ್ಷತೆಗೆ, ಮಿತವ್ಯಯಕ್ಕೆ ಮತ್ತು ಸುರಕ್ಷತೆಗೆ ಸೂಕ್ತ ಗಮನ ನೀಡತಕ್ಕದ್ದು.

(4) ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ-

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನನ್ನು ಪ್ರಾಧಿಕಾರವು ಉಪೇಕ್ಷಿಸುವುದಕ್ಕೆ ಅಧಿಕಾರ ನೀಡಿದೆ ಎಂದು; ಅಥವಾ

(ಬಿ) ಪ್ರಾಧಿಕಾರವು ಅಥವಾ ಅದರ ಅಧಿಕಾರಿಗಳು ಅಥವಾ ಇತರ ನೌಕರರು ಯಾವ ಕರ್ತವ್ಯಕ್ಕೆ ಅಥವಾ ಹೊಣೆಗೆ ಒಳಪಟ್ಟಿಲ್ಲವೋ ಆ ಕರ್ತವ್ಯಕ್ಕೆ ಅಥವಾ ಹೊಣೆಗೆ ಸಂಬಂಧಿಸಿದಂತೆ ಯಾವುದೇ ವ್ಯವಹರಣೆಯನ್ನು ಹೂಡಲು ಯಾರೇ ವ್ಯಕ್ತಿಗೆ ಅಧಿಕಾರ ನೀಡುತ್ತದೆ ಎಂದು

– ಅರ್ಥೈಸತಕ್ಕದ್ದಲ್ಲ.

**12. ಇತರ ಏಜೆನ್ಸಿಗಳ ಜವಾಬ್ದಾರಿಗಳು ಮತ್ತು ಅಧಿಕಾರಗಳು.–** (1) ಭಾರತದ ಗಡಿಗಳಲ್ಲಿ ನಿಯೋಜಿಸಿರುವ ಸಂಬಂಧಪಟ್ಟ ಗಡಿ ಸಂರಕ್ಷಣಾ ಪಡೆಗಳು ಸಂಯೋಜಿತ ತನಿಖಾ ಠಾಣೆಗಳ ಸುತ್ತಮುತ್ತಲಿನ ಭದ್ರತೆಗೆ ಜವಾಬ್ದಾರಿಯಾಗಿರತಕ್ಕದ್ದು.

(2) ಪ್ರಾಧಿಕಾರವು, ಸಂಯೋಜಿತ ತನಿಖಾ ಠಾಣೆಗಳಲ್ಲಿ ಶಾಂತಿ ಮತ್ತು ಭದ್ರತೆಯನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಉಪಬಂಧಗಳಿಗನುಸಾರವಾಗಿ ಸಶಸ್ತ್ರ ಪಡೆಗಳ, ಕೇಂದ್ರ ಅರೆ ಸೇನಾಪಡೆಗಳ ಅಥವಾ ರಾಜ್ಯ ಪೊಲೀಸಿನ ನೆರವು ಅವಶ್ಯವೆಂದು ಪರಿಗಣಿಸಿದಾಗಲೆಲ್ಲ ಆ ನೆರವನ್ನು ಕೋರಬಹುದು.

(3) ಪ್ರಾಧಿಕಾರದ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವುದಕ್ಕಾಗಿ ಸೀಮಾಸುಂಕ, ವಲಸೆ, ರೋಗಿ ಸಂಸರ್ಗ ನಿಷೇಧ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಮತ್ತು ಇತರ ಸಿಬ್ಬಂದಿಗಳು ಪ್ರಾಧಿಕಾರದೊಂದಿಗೆ ಸಮನ್ವಯದಿಂದ ಕಾರ್ಯನಿರ್ವಹಿಸತಕ್ಕದ್ದು.

(4) ಈ ಅಧಿನಿಯಮದ ಯಾವುದೇ ಉಪಬಂಧಗಳಲ್ಲಿ ಏನೇ ಒಳಗೊಂಡಿದ್ದರೂ, ಸೀಮಾಸುಂಕ, ವಲಸೆ ಮತ್ತು ರೋಗಿ ಸಂಸರ್ಗ ನಿಷೇಧ ಸ್ಥಳದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು, ಗಡಿಕಾವಲು ಪಡೆಗಳು ಮತ್ತು ಪೊಲೀಸರು ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿಗೆ ಅನುಸಾರವಾಗಿ ತಮ್ಮತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

## ಅಧ್ಯಾಯ IV

## ಸ್ವತ್ತು ಮತ್ತು ಕರಾರು

**13. ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಪ್ರಾಧಿಕಾರದಲ್ಲಿ ನಿಹಿತವಾಗುವುದು.–** (1) ಪ್ರಕರಣ 2ರ (ಡಿ) ಖಂಡದ ಮೇರೆಗೆ ಹೊರಡಿಸಿದ ಅಧಿಸೂಚನೆಯ ದಿನಾಂಕದಂದು, ಆ ಅಧಿಸೂಚನೆಯಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಎಲ್ಲಾ ಆಸ್ತಿಗಳು, ಹಕ್ಕುಗಳು, ಅಧಿಕಾರಗಳು, ಪ್ರಾಧಿಕಾರಗಳು ಮತ್ತು ವಿಶೇಷಾಧಿಕಾರಗಳು ಹಾಗೂ ಆ ಅಧಿಸೂಚನೆಯನ್ನು ಹೊರಡಿಸುವ ನಿಕಟಪೂರ್ವದಲ್ಲಿ ಯಾವುದೇ ಭೂ ಬಂದರಿನಲ್ಲಿ ಭಾರತ ಸರ್ಕಾರದ ಒಡೆತನದಲ್ಲಿದ್ದ ಅಥವಾ ಸ್ವಾಧೀನದಲ್ಲಿದ್ದ ಭೂಮಿಗಳು, ಕಟ್ಟಡಗಳು, ಯಂತ್ರೋಪಕರಣಗಳು, ಸಾಧನ ಸಾಮಗ್ರಿಗಳು, ಕಾಮಗಾರಿಗಳು, ಕಾರ್ಯಾಗಾರಗಳು, ನಗದು ಶಿಲ್ಕುಗಳು, ಬಂಡವಾಳ, ಮೀಸಲುಗಳು, ಮೀಸಲು ನಿಧಿಗಳು, ಹೂಡಿಕೆಗಳು, ಗೇಣಿದಾರಿಕೆಗಳು, ನಷ್ಟಗಳು ಮತ್ತು ಪುಸ್ತಕ ಋಣಗಳು ಸೇರಿದಂತೆ ಅಂಥ ಚರ ಮತ್ತು ಸ್ಥಿರ, ವಾಸ್ತವಿಕವಾದ ಅಥವಾ ವೈಯಕ್ತಿಕವಾದ, ಮೂರ್ತವಾದ ಅಥವಾ ಅಮೂರ್ತವಾದ, ಪ್ರಸ್ತುತ ಇರುವ ಅಥವಾ ಸಂಭವನೀಯವಾದ ಯಾವುದೇ ಸ್ವರೂಪದ ಅಂಥ ಸ್ವತ್ತು ಮತ್ತು ಅಂಥ ಸ್ವತ್ತಿನಿಂದ ಉಂಟಾಗುವ ಎಲ್ಲ ಇತರ ಹಕ್ಕುಗಳು ಹಾಗೂ ಹಿತಾಸಕ್ತಿಗಳು ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಹಾಗೆ ನಿಹಿತಗೊಂಡವುಗಳಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಬಗೆಯ ಎಲ್ಲಾ ಸಾಲಗಳು, ಹೊಣೆಗಾರಿಕೆಗಳು ಮತ್ತು ಬಾಧ್ಯತೆಗಳು ಸಹ ಒಳಗೊಂಡಿವೆ ಎಂದು ಭಾವಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗಿನ ಅಧಿಸೂಚನೆಯನ್ನು, ಭಾರತ ಸರ್ಕಾರದ ಸಂಬಂಧಪಟ್ಟ ಮಂತ್ರಾಲಯಗಳು ಅಥವಾ ಇಲಾಖೆಗಳು, ಅಂಥ ಸ್ವತ್ತುಗಳ ಒಡೆತನವನ್ನು ಮತ್ತು ನಿಯಂತ್ರಣವನ್ನು ಹೊಂದಿದ್ದಲ್ಲಿ, ಆ ಮಂತ್ರಾಲಯಗಳ ಅಥವಾ ಇಲಾಖೆಗಳ ಸಹಮತಿಯನ್ನು ಪಡೆದ ತರುವಾಯ ಮಾತ್ರವೇ ಹೊರಡಿಸತಕ್ಕದ್ದು.

**14. ಒಡಂಬಡಿಕೆಗಳನ್ನು ಪ್ರಾಧಿಕಾರದಲ್ಲಿ ನಿಹಿತಗೊಳಿಸಿದ್ದರಿಂದಾಗುವ ಸಾಮಾನ್ಯ ಪರಿಣಾಮ.–** 2ನೇ ಪ್ರಕರಣದ (ಡಿ) ಖಂಡದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಅಸ್ತಿತ್ವದಲ್ಲಿ ಇರುವ ಹಾಗೂ ಭೂ ಬಂದರುಗಳಿಗೆ ಸಂಬಂಧಿಸಿದ ಎಲ್ಲಾ ಕರಾರುಗಳು, ಒಪ್ಪಂದಗಳು ಮತ್ತು ಕಾರ್ಯನಿರ್ವಹಣಾ ಏರ್ಪಾಡುಗಳು ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಪೂರ್ಣವಾಗಿ ಜಾರಿಗೆ ತರುವಂಥವುಗಳು ಮತ್ತು ಪರಿಣಾಮವನ್ನು ಹೊಂದಿರುವಂಥವುಗಳಾಗಿರತಕ್ಕದ್ದು.

**15. ಖಾತರಿಯು ಸಲುವಳಿಯಲ್ಲಿರುವುದು.–** ಸಾಲಕ್ಕೆ, ಗೇಣಿಗೆ ಅಥವಾ ಹಣಕಾಸಿಗೆ ಸಂಬಂಧಿಸಿದಂತೆ ಭೂ ಸೀಮಾಸುಂಕ ಕೇಂದ್ರಗಳಿಗೆ ಅಥವಾ ವಲಸೆ ತನಿಖಾ ಠಾಣೆಗಳಿಗೆ ಅಥವಾ ಅವುಗಳ ಪರವಾಗಿ ನೀಡಿದ ಯಾವುದೇ ಖಾತರಿಯು ಈ ಅಧಿನಿಯಮದ ಬಲದಿಂದಾಗಿ ಪ್ರಾಧಿಕಾರದಲ್ಲಿ ನಿಹಿತಗೊಳಿಸಿರುವಂತಹ ಕೇಂದ್ರಗಳಿಗೆ ಅಥವಾ ತನಿಖಾ ಠಾಣೆಗಳಿಗೆ ಸಂಬಂಧಿಸಿದಂತೆ ಸಲುವಳಿಯಲ್ಲಿರುವುದು ಮುಂದುವರಿಯತಕ್ಕದ್ದು.

**16. ಪ್ರಾಧಿಕಾರಕ್ಕಾಗಿ ಭೂಮಿಯ ಕಡ್ಡಾಯ ಆರ್ಜನೆ.–** ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಪ್ರಾಧಿಕಾರಕ್ಕೆ ಬೇಕಾದ ಯಾವುದೇ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬೇಕಾಗಿದೆ ಎಂದು ಭಾವಿಸತಕ್ಕದ್ದು ಮತ್ತು ಅಂಥ ಭೂಮಿಯನ್ನು ರಾಷ್ಟ್ರೀಯ ಹೆದ್ದಾರಿಗಳ ಅಧಿನಿಯಮ, 1956 (1956 ರ 48)ರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳ ಮೇರೆಗೆ ಪ್ರಾಧಿಕಾರಕ್ಕಾಗಿ ಆರ್ಜಿಸಬಹುದು.

**17. ಪ್ರಾಧಿಕಾರದಿಂದ ಕರಾರುಗಳು.–** ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಯಾವುದೇ ಕರಾರನ್ನು 18ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಮಾಡಿಕೊಳ್ಳಲು ಮತ್ತು ಅದನ್ನು ನೆರವೇರಿಸಲು ಸಕ್ಷಮವಾಗಿರತಕ್ಕದ್ದು.

**18. ಪ್ರಾಧಿಕಾರದ ಪರವಾಗಿ ಕರಾರುಗಳನ್ನು ಮಾಡಿಕೊಳ್ಳುವ ವಿಧಾನ.–** (1) ಪ್ರಾಧಿಕಾರದ ಪರವಾಗಿ ಮಾಡಿಕೊಳ್ಳುವ ಪ್ರತಿಯೊಂದು ಕರಾರನ್ನು ಪ್ರಾಧಿಕಾರದ ಅಧ್ಯಕ್ಷನು ಅಥವಾ ಪ್ರಾಧಿಕಾರವು ಈ ಬಗ್ಗೆ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿಯು ಮಾಡಿಕೊಳ್ಳತಕ್ಕದ್ದು ಮತ್ತು ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕರಾರುಗಳನ್ನು ಪ್ರಾಧಿಕಾರದ ಸಾಮಾನ್ಯ ಮೊಹರನ್ನು ಹಾಕಿ ಸೀಲು ಮಾಡತಕ್ಕದ್ದು:

ಪರಂತು, ಕೇಂದ್ರ ಸರ್ಕಾರವು ಈ ಬಗ್ಗೆ ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ಮೌಲ್ಯವನ್ನು ಅಥವಾ ಮೊತ್ತವನ್ನು ಮೀರುವಂಥ ಯಾವುದೇ ಕರಾರಿಗೆ, ಕೇಂದ್ರ ಸರ್ಕಾರವು ಪೂರ್ವಾನುಮೊದನೆ ನೀಡಿದ್ದ ಹೊರತು ಅಂಥ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ:

ಮತ್ತೂ ಪರಂತು, ಸ್ಥಿರ ಸ್ವತ್ತನ್ನು ಆರ್ಜಿಸುವುದಕ್ಕೆ ಅಥವಾ ಮಾರಾಟ ಮಾಡುವುದಕ್ಕೆ ಅಥವಾ ಮೂವತ್ತು ವರ್ಷಗಳಿಗೆ ಮೀರಿದ ಅವಧಿಗೆ ಅಂಥ ಯಾವುದೇ ಸ್ವತ್ತನ್ನು ಗುತ್ತಿಗೆಗೆ ಕೊಡುವುದಕ್ಕೆ ಸಂಬಂಧಿಸಿದ ಯಾವುದೇ ಕರಾರಿಗೆ ಮತ್ತು ಕೇಂದ್ರ ಸರ್ಕಾರವು ಈ ಬಗ್ಗೆ ಆದೇಶದ ಮೂಲಕ ನಿಗದಿಪಡಿಸಬಹುದಾದಂಥ ಮೌಲ್ಯವನ್ನು ಅಥವಾ ಮೊತ್ತವನ್ನು ಮೀರುವಂಥ ಯಾವುದೇ ಕರಾರಿಗೆ ಕೇಂದ್ರ ಸರ್ಕಾರವು ಪೂರ್ವಾನುಮೋದನೆ ನೀಡಿದ್ದ ಹೊರತು ಅಂಥ ಕರಾರನ್ನು ಮಾಡಿಕೊಳ್ಳತಕ್ಕದ್ದಲ್ಲ.

(2) ಉಪಪ್ರಕರಣ (1)ರ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಯಾವುದೇ ಕರಾರನ್ನು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕೊ ಆ ನಮೂನೆಯು ಮತ್ತು ರೀತಿಯು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

(3) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ ಇಲ್ಲದಿರುವ ಯಾವುದೇ ಕರಾರಿಗೆ ಪ್ರಾಧಿಕಾರವು ಬದ್ಧವಾಗಿರತಕ್ಕದ್ದಲ್ಲ.

## ಅಧ್ಯಾಯ V

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**19. ಫೀಜುಗಳು, ಬಾಡಿಗೆ, ಇತ್ಯಾದಿಗಳನ್ನು ವಿಧಿಸಲು ಪ್ರಾಧಿಕಾರದ ಅಧಿಕಾರ.–** ಪ್ರಾಧಿಕಾರವು, ಪ್ರತಿಯೊಂದು ಸಂಯೋಜಿತ ತನಿಖಾ ಠಾಣೆಗೆ ಪ್ರತ್ಯೇಕವಾಗಿ, ಯಾವುದೇ ಇತರ ಅಧಿನಿಯಮದ ಮೇರೆಗೆ ಶಾಸನಬದ್ಧ ಲೇವಿಯಾಗಿರದ, ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂಥ ಫೀಜನ್ನು ಅಥವಾ ಬಾಡಿಗೆಯನ್ನು,–

(ಎ) ಸಾರಿಗೆ ಕಾರ್ಯಾಚರಣೆಗಳ ಸಂಬಂಧದಲ್ಲಿ ರವಾನೆ ಸರಕುಗಳ ನಿರ್ವಹಣೆಗಾಗಿ, ಉಗ್ರಾಣಗಳಿಗಾಗಿ, ಟ್ರಕ್‌ಗಳನ್ನು ನಿಲ್ಲಿಸುವುದಕ್ಕಾಗಿ ಅಥವಾ ಯಾವುದೇ ಇತರ ಸೇವೆಗಾಗಿ ಅಥವಾ ಸೌಕರ್ಯಕ್ಕಾಗಿ;

(ಬಿ) ಪ್ರಯಾಣಿಕರ ವಾಹನಗಳ ನಿಲುಗಡೆಗಾಗಿ ಮತ್ತು ಪ್ರಯಾಣಿಕರಿಗೆ ಹಾಗೂ ಬಂದು ಹೋಗುವ ವ್ಯಕ್ತಿಗಳಿಗೆ ನೀಡಿದ ಇತರ ಸೌಕರ್ಯಗಳಿಗಾಗಿ; ಮತ್ತು

(ಸಿ) ಪ್ರಾಧಿಕಾರವು ನೀಡಿದಂಥ ಸೌಕರ್ಯಗಳನ್ನು ಮತ್ತು ಇತರ ಸೇವೆಗಳನ್ನು ಬಳಸಿಕೊಳ್ಳುವುದಕ್ಕಾಗಿ

– ನಿರ್ಧರಿಸಬಹುದು ಮತ್ತು ವಿಧಿಸಬಹುದು.

**20. ಕೇಂದ್ರ ಸರ್ಕಾರದಿಂದ ಪ್ರಾಧಿಕಾರಕ್ಕೆ ಹೆಚ್ಚುವರಿ ಬಂಡವಾಳ ಮತ್ತು ಅನುದಾನ.–** ಕೇಂದ್ರ ಸರ್ಕಾರವು, ಸಂಸತ್ತು ಈ ಬಗ್ಗೆ ಕಾನೂನಿನ ಮೂಲಕ ಹಣವನ್ನು ಹಂಚಿಕೆ ಮಾಡಿದ ತರುವಾಯ,–

(ಎ) ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಪ್ರಾಧಿಕಾರಕ್ಕೆ ಅಗತ್ಯವಿರಬಹುದಾದ ಯಾವುದೇ ಬಂಡವಾಳವನ್ನು ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಒದಗಿಸಬಹುದು;

(ಬಿ) ಈ ಅಧಿನಿಯಮದ ಮೇರೆಗೆ ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನಿರ್ವಹಿಸುವುದಕ್ಕಾಗಿ ಅವಶ್ಯವೆಂದು ಕೇಂದ್ರ ಸರ್ಕಾರವು ಪರ್ಯಾಲೋಚಿಸಬಹುದಾದಂಥ ಹಣದ ಮೊತ್ತವನ್ನು ಸಾಲಗಳ ಅಥವಾ ಅನುದಾನಗಳ ರೂಪದಲ್ಲಿ ಕೇಂದ್ರ ಸರ್ಕಾರವು ನಿರ್ಧರಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ ಪ್ರಾಧಿಕಾರಕ್ಕೆ ಸಂದಾಯ ಮಾಡಬಹುದು.

**21. ಪ್ರಾಧಿಕಾರದ ನಿಧಿ ಮತ್ತು ಅದರ ಹೂಡಿಕೆ.–** (1) ಪ್ರಾಧಿಕಾರವು ತನ್ನದೇ ಆದ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಪ್ರಾಧಿಕಾರಕ್ಕೆ ಬರುವ ಎಲ್ಲಾ ಹಣವನ್ನು ಅದಕ್ಕೆ ಜಮೆ ಮಾಡತಕ್ಕದ್ದು ಮತ್ತು ಪ್ರಾಧಿಕಾರವು ಮಾಡಬೇಕಾದ ಎಲ್ಲಾ ಸಂದಾಯಗಳನ್ನು ಅದರಿಂದ ಮಾಡತಕ್ಕದ್ದು.

(2) ಪ್ರಾಧಿಕಾರದ ಎಲ್ಲಾ ಆಡಳಿತ ವೆಚ್ಚಗಳನ್ನು ಭರಿಸಲು ಅಥವಾ ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಉದ್ದೇಶಗಳಿಗಾಗಿ ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ಮೊತ್ತವನ್ನು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಖರ್ಚು ಮಾಡಲು ಅದು ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ಮೊತ್ತಗಳನ್ನು ಪ್ರಾಧಿಕಾರದ ನಿಧಿಯಿಂದ ಮಾಡಿದ ವೆಚ್ಚವೆಂದು ಪರಿಗಣಿಸತಕ್ಕದ್ದು.

(3) ಉಪಪ್ರಕರಣ (2)ರಲ್ಲಿ ಉಪಬಂಧಿಸಿರುವಂತೆ ಕೂಡಲೇ ವಿನಿಯೋಗಿಸಲು ಆಗದಂಥ ಪ್ರಾಧಿಕಾರದ ಲೆಕ್ಕದಲ್ಲಿರುವ ಎಲ್ಲಾ ಹಣವನ್ನು–

(ಎ) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಅಥವಾ ಯಾವುದೇ ಅಂಥ ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ಅಥವಾ ಬ್ಯಾಂಕುಗಳಲ್ಲಿ ಅಥವಾ ಇತರ ಸಾರ್ವಜನಿಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿ ಇಡತಕ್ಕದ್ದು;

(ಬಿ) ಕೇಂದ್ರ ಸರ್ಕಾರದ ಭದ್ರತಾ ಪತ್ರಗಳಲ್ಲಿ ಅಥವಾ ನಿಯಮಿಸಬಹುದಾದಂಥ ರೀತಿಯಲ್ಲಿ ಹೂಡತಕ್ಕದ್ದು.

ವಿವರಣೆ.– ಈ ಉಪಪ್ರಕರಣದಲ್ಲಿ, **"ಷೆಡ್ಯೂಲ್ಡ್ ಬ್ಯಾಂಕ್"** ಪದವು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934 ರ 2)ರ 2ನೇ ಪ್ರಕರಣದ (ಇ) ಖಂಡದಲ್ಲಿ ಅದಕ್ಕಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**22. ಹೆಚ್ಚುವರಿ ನಿಧಿಗಳ ಹಂಚಿಕೆ.–** (1) ಪ್ರಾಧಿಕಾರವು, ಯಾವುದೇ ಸಂಯೋಜಿತ ತನಿಖಾ ಠಾಣೆಯಲ್ಲಿ ಹಾಲಿ ಇರುವ ಸೌಲಭ್ಯಗಳನ್ನು ಅಥವಾ ಸೇವೆಗಳನ್ನು ವಿಸ್ತರಿಸುವ ಅಥವಾ ಹೊಸ ಸೌಲಭ್ಯಗಳನ್ನು ಮತ್ತು ಸೇವೆಗಳನ್ನು ಸೃಜಿಸುವ ಉದ್ದೇಶಕ್ಕಾಗಿ ಅಥವಾ ಅಲ್ಪಕಾಲೀನ ಕಾರಣಗಳಿಂದಾಗಿ ವೆಚ್ಚದಲ್ಲಿ ಉಂಟಾಗುವ ಹೆಚ್ಚಳಕ್ಕಾಗಿ ಅಥವಾ ಬದಲಾಯಿಸುವ ಅಥವಾ ಯಾವುದೇ ನೈಸರ್ಗಿಕ ವಿಕೋಪದಿಂದಾಗಿ ಅಥವಾ ಅವಘಡದಿಂದಾಗಿ ಆದ ನಷ್ಟದಿಂದ ಅಥವಾ ಹಾನಿಯಿಂದ ಉಂಟಾದ ವೆಚ್ಚವನ್ನು ಅಥವಾ ಪುನಃ ಭರಿಸುವ ಅಥವಾ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವಾಗ ಆದ ಯಾವುದೇ ಲೋಪ ದೋಷಗಳ ಕಾರಣದಿಂದಾಗಿ ಉಂಟಾದ ಯಾವುದೇ ಹೊಣೆಗಾರಿಕೆಯನ್ನು ಈಡೇರಿಸುವ ಉದ್ದೇಶಗಳಿಗಾಗಿ ಕಾಲಕಾಲಕ್ಕೆ ಸೂಕ್ತವೆಂದು ತಾನು ಭಾವಿಸಬಹುದಾದಂಥ ಮೊಬಲಗುಗಳನ್ನು ಮೀಸಲು ನಿಧಿಯಾಗಿ ಅಥವಾ ನಿಧಿಗಳಾಗಿ ಪ್ರತ್ಯೇಕವಾಗಿ ಇಡತಕ್ಕದ್ದು:

ಪರಂತು, ಪ್ರಾಧಿಕಾರವು ನಿರ್ದಿಷ್ಟ ಉದ್ದೇಶಗಳಿಗಾಗಿ, ನಿರ್ದಿಷ್ಟ ಮೀಸಲು ನಿಧಿಗಳನ್ನು ಸ್ಥಾಪಿಸಲು ಸಹ ಅಧಿಕಾರವನ್ನೂ ಹೊಂದಿರತಕ್ಕದ್ದು:

ಮತ್ತೂ ಪರಂತು, ಪ್ರತಿಯೊಂದು ನಿಧಿಯ ಅಥವಾ ಯಾವುದೇ ನಿರ್ದಿಷ್ಟ ಮತ್ತು ಸಾಮಾನ್ಯ ಮೀಸಲು ನಿಧಿಗಳ ಸಂಬಂಧದಲ್ಲಿ ಪ್ರತಿಯೊಂದು ವರ್ಷದಲ್ಲಿ ತೆಗೆದಿಟ್ಟ ಮೊತ್ತಗಳು ಮತ್ತು ಯಾವುದೇ ಕಾಲದಲ್ಲಿ ಅಂಥ ಮೊತ್ತಗಳ ಸರಾಸರಿಯು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಈ ಬಗ್ಗೆ ನಿಗದಿಪಡಿಸಬಹುದಾದಂಥ ಮಿತಿಗಳಿಗಿಂತ ಹೆಚ್ಚಾಗಿರತಕ್ಕದ್ದಲ್ಲ.

(2) ಅಂಥ ಮೀಸಲು ನಿಧಿಗೆ ಮತ್ತು ನಿಧಿಗಳಿಗೆ ಮತ್ತು ವಸೂಲಾಗದ ಹಾಗೂ ವಸೂಲಾಗುವುದು ಸಂದೇಹಾಸ್ಪದವಾದ ಸಾಲಗಳಿಗೆ, ಆಸ್ತಿಗಳಲ್ಲಿನ ಸವಕಳಿಗೆ ಮತ್ತು 1956 (1956 ರ 1) ರ ಕಂಪನಿಗಳ ಅಧಿನಿಯಮದ ಮೇರೆಗೆ ನೋಂದಾಯಿತವಾದ ಮತ್ತು ನಿಗಮಿತವಾದ ಕಂಪನಿಗಳು ಸಾಮಾನ್ಯವಾಗಿ ಉಪಬಂಧ ಕಲ್ಪಿಸುವಂಥ ಎಲ್ಲಾ ಇತರ ವಿಷಯಗಳಿಗೆ ಅವಕಾಶ ಕಲ್ಪಿಸಿದ ತರುವಾಯ, ಪ್ರಾಧಿಕಾರವು ತನ್ನ ವರ್ಷದ ನಿವ್ವಳ ಲಾಭದಲ್ಲಿ ಉಳಿಯುವ ಹಣವನ್ನು ಕೇಂದ್ರ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

23. **ಕಾರ್ಯಚಟುವಟಿಕೆಗಳ ಸೂಚಿಯನ್ನು ಮತ್ತು ಹಣಕಾಸಿನ ಅಂದಾಜುಗಳನ್ನು ಸಲ್ಲಿಸುವುದು.–** ಪ್ರಾಧಿಕಾರವು ಪ್ರತಿಯೊಂದು ಹಣಕಾಸು ವರ್ಷ ಪ್ರಾರಂಭವಾಗುವುದಕ್ಕೆ ಮೊದಲು ಮುಂಬರುವ ಹಣಕಾಸು ವರ್ಷದಲ್ಲಿ ಅದು ಕೈಗೊಳ್ಳಲಿರುವ ಕಾರ್ಯಚಟುವಟಿಕೆಗಳ ಸೂಚಿಯನ್ನು ಹಾಗೂ ಅದಕ್ಕೆ ಸಂಬಂಧಿಸಿದ ಹಣಕಾಸಿನ ಅಂದಾಜಿನ ವಿವರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

24. **ಸಾಲ ಪಡೆಯಲು ಪ್ರಾಧಿಕಾರಕ್ಕೆ ಇರುವ ಅಧಿಕಾರಗಳು.–** (1) ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಅದರ ಎಲ್ಲಾ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಕೇಂದ್ರ ಸರ್ಕಾರದ ಸಮ್ಮತಿಯೊಂದಿಗೆ ಅಥವಾ ಕೇಂದ್ರ ಸರ್ಕಾರವು ಅದಕ್ಕೆ ನೀಡಿದ ಯಾವುದೇ ಸಾಮಾನ್ಯ ಅಥವಾ ವಿಶೇಷ ಪ್ರಾಧಿಕಾರದ ನಿಬಂಧನೆಗಳಿಗನುಸಾರವಾಗಿ, ಬಾಂಡ್‌ಗಳನ್ನು, ಡಿಬೆಂಚರುಗಳನ್ನು ಅಥವಾ ಸೂಕ್ತವೆಂದು ತಾನು ಭಾವಿಸಬಹುದಾದಂಥ ಇತರ ಲಿಖಿತ ಪತ್ರಗಳನ್ನು ನೀಡುವ ಮೂಲಕ ಯಾವುದೇ ಮೂಲದಿಂದ ಹಣವನ್ನು ಸಾಲವಾಗಿ ಪಡೆಯಬಹುದು.

(2) ಉಪಪ್ರಕರಣ (1)ರ ಮೇರೆಗೆ ಪ್ರಾಧಿಕಾರವು ತೆಗೆದುಕೊಂಡ ಸಾಲಗಳ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಅಸಲಿನ ಮರುಸಂದಾಯಕ್ಕೆ ಮತ್ತು ಅದರ ಮೇಲಿನ ಬಡ್ಡಿಯ ಸಂದಾಯಕ್ಕೆ ಸಂಬಂಧಿಸಿದಂತೆ ಅದು ಸೂಕ್ತವೆಂದು ಭಾವಿಸಬಹುದಾದಂತಹ ರೀತಿಯಲ್ಲಿ ಖಾತರಿಯನ್ನು ಕೊಡಬಹುದು.

(3) ಕೇಂದ್ರ ಸರ್ಕಾರವು ಕಾಲಕಾಲಕ್ಕೆ ವಿಧಿಸಬಹುದಾದಂಥ ಪರಿಮಿತಿಗೊಳಪಟ್ಟು ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಅಗತ್ಯವಾಗಬಹುದಾದಷ್ಟು ಮೊತ್ತವನ್ನು ಓವರ್‌ಡ್ರಾಫ್ಟ್ ರೂಪದಲ್ಲಿ ಅಥವಾ ಬೇರೆ ರೀತಿಯಲ್ಲಿ ತಾತ್ಕಾಲಿಕವಾಗಿ ಸಾಲವಾಗಿ ಪಡೆಯಬಹುದು.

25. **ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.–** (1) ಪ್ರಾಧಿಕಾರವು, ಭಾರತದ ಲೆಕ್ಕ ನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನೊಂದಿಗೆ ಸಮಾಲೋಚಿಸಿ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಮರ್ಪಕವಾದ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲಾಭ ಮತ್ತು ನಷ್ಟದ ಲೆಕ್ಕ ಹಾಗೂ ಜಮಾ ಖರ್ಚು ಪಟ್ಟಿಯೂ ಸೇರಿದಂತೆ ಲೆಕ್ಕಪತ್ರಗಳ ವಾರ್ಷಿಕ ವಿವರಣಾ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಭಾರತದ ಲೆಕ್ಕನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನು ಪ್ರತಿವರ್ಷ ಲೆಕ್ಕಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಆತ ಮಾಡಿದ ಯಾವುದೇ ವೆಚ್ಚವನ್ನು ಪ್ರಾಧಿಕಾರವು ಆತನಿಗೆ ತುಂಬಿಕೊಡತಕ್ಕದ್ದು.

(3) ಭಾರತದ ಲೆಕ್ಕ ನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನು ಅಥವಾ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಆತನಿಂದ ನೇಮಕಗೊಂಡ ಯಾರೇ ವ್ಯಕ್ತಿಯು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ, ಸರ್ಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಂಬಂಧದಲ್ಲಿ ಲೆಕ್ಕ ನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನು ಹೊಂದಿರುವಂತಹದೇ ಹಕ್ಕುಗಳನ್ನು ಮತ್ತು ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದರಲ್ಲೂ ಮುಖ್ಯವಾಗಿ, ಪುಸ್ತಕಗಳನ್ನು, ಲೆಕ್ಕಪತ್ರಗಳನ್ನು, ಸಂಬಂಧಪಟ್ಟ ವೋಚರುಗಳನ್ನು, ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಕೇಳುವ ಮತ್ತು ಪ್ರಾಧಿಕಾರದ ಯಾವುದೇ ಕಚೇರಿಗಳನ್ನು ತಪಾಸಣೆ ಮಾಡುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕನಿಯಂತ್ರಕ ಹಾಗೂ ಮಹಾಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಆತನಿಂದ ನೇಮಕಗೊಂಡ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಪ್ರತಿವರ್ಷ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಅವುಗಳನ್ನು ಸಂಸತ್‌ನ ಎರಡೂ ಸದನಗಳ ಮುಂದೆ ಇರಿಸತಕ್ಕದ್ದು.

## ಅಧ್ಯಾಯ VI

### ಸಂಕೀರ್ಣ

26. **ವಾರ್ಷಿಕ ವರದಿಯನ್ನು ಸಲ್ಲಿಸುವುದು.–** (1) ಪ್ರಾಧಿಕಾರವು ಪ್ರತಿ ಹಣಕಾಸು ವರ್ಷವು ಮುಕ್ತಾಯವಾದ ತರುವಾಯ ಸಾಧ್ಯವಾದಷ್ಟು ಬೇಗನೆ, ಆ ಹಣಕಾಸು ವರ್ಷದಲ್ಲಿ ಅದು ಕೈಗೊಂಡ ಕಾರ್ಯಚಟುವಟಿಕೆಗಳ ವಿವರವನ್ನು ನೀಡುವ ವರದಿಯನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ಮುಂದಿನ ಹಣಕಾಸು ವರ್ಷದಲ್ಲಿ ಪ್ರಾಧಿಕಾರವು ಕೈಗೊಳ್ಳುವ ಸಂಭವವಿರುವ ಕಾರ್ಯಚಟುವಟಿಕೆಗಳ ವಿವರವನ್ನು ಸಹ ಆ ವರದಿಯಲ್ಲಿ ನೀಡಿರತಕ್ಕದ್ದು.

(2) ಅಂಥ ವರದಿಯನ್ನು ಸಲ್ಲಿಸಿದ ತರುವಾಯ ಕೇಂದ್ರ ಸರ್ಕಾರವು ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಎರಡೂ ಸದನಗಳ ಮುಂದೆ ಅದನ್ನು ಇರಿಸತಕ್ಕದ್ದು.

27. **ಅಧಿಕಾರವನ್ನು ವಹಿಸಿಕೊಡುವುದು.–** ಪ್ರಾಧಿಕಾರವು, ಸಾಮಾನ್ಯ ಅಥವಾ ವಿಶೇಷ ಲಿಖಿತ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಷರತ್ತುಗಳು ಮತ್ತು ಪರಿಮಿತಿಗಳು ಏನಾದರೂ ಇದ್ದರೆ, ಅವುಗಳಿಗೆ ಒಳಪಟ್ಟು ಅದು ಅವಶ್ಯವೆಂದು ಭಾವಿಸಬಹುದಾದಂಥ ಈ ಅಧಿನಿಯಮದ ಮೇರೆಗಿನ ತನ್ನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು (35ನೇ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಹೊರತುಪಡಿಸಿ) ಪ್ರಾಧಿಕಾರದ ಅಧ್ಯಕ್ಷನಿಗೆ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಯಾರೇ ಅಧಿಕಾರಿಗೆ ವಹಿಸಿಕೊಡಬಹುದು.

28. **ಪ್ರಾಧಿಕಾರದ ಆದೇಶಗಳನ್ನು ಮತ್ತು ಇತರ ಲಿಖಿತಪತ್ರಗಳನ್ನು ಅಧಿಪ್ರಮಾಣೀಕರಿಸುವುದು.–** ಪ್ರಾಧಿಕಾರದ ಎಲ್ಲಾ ಆದೇಶಗಳನ್ನು ಮತ್ತು ನಿರ್ಣಯಗಳನ್ನು ಪ್ರಾಧಿಕಾರದ ಅಧ್ಯಕ್ಷನು ಅಥವಾ ಅಧಿಪ್ರಮಾಣೀಕರಿಸುವ ಉದ್ದೇಶಕ್ಕಾಗಿ ಪ್ರಾಧಿಕಾರವು ಅಧಿಕೃತಗೊಳಿಸಿದ ಇತರ ಯಾರೇ ಸದಸ್ಯನು ಸಹಿ ಮಾಡಿ ಅಧಿಪ್ರಮಾಣೀಕರಿಸತಕ್ಕದ್ದು ಮತ್ತು ಪ್ರಾಧಿಕಾರವು ಬರೆದುಕೊಟ್ಟ ಎಲ್ಲಾ ಇತರ ಲಿಖಿತ ಪತ್ರಗಳನ್ನು ಅಧಿಪ್ರಮಾಣೀಕರಿಸುವುದಕ್ಕಾಗಿ ಪ್ರಾಧಿಕಾರವು ಅಧಿಕೃತಗೊಳಿಸಿದ ಪ್ರಾಧಿಕಾರದ ಅಧಿಕಾರಿಯು ಸಹಿ ಮಾಡಿ ಅಧಿಪ್ರಮಾಣೀಕರಿಸತಕ್ಕದ್ದು.

29. **ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು ಲೋಕನೌಕರರಾಗಿರುವುದು.–** ಪ್ರಾಧಿಕಾರದ ಎಲ್ಲ ಅಧಿಕಾರಿಗಳು ಮತ್ತು ನೌಕರರು ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಅಥವಾ ವಿನಿಯಮಕ್ಕೆ ಅನುಸಾರವಾಗಿ ಕಾರ್ಯನಿರ್ವಹಿಸುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ ಅವರನ್ನು ಭಾರತ ದಂಡ ಸಂಹಿತೆ (1860 ರ 45)ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

30. **ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮಕ್ಕೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಕ್ಕೆ ಅಥವಾ ವಿನಿಯಮಕ್ಕೆ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಪ್ರಾಧಿಕಾರದ ಅಥವಾ ಪ್ರಾಧಿಕಾರದ ಯಾರೇ ಸದಸ್ಯನ ಅಥವಾ ಯಾರೇ ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

31. **ಕಾಣೆಯಾಗಿದ್ದು ನಂತರ ಕಂಡುಬಂದ ಸ್ವತ್ತಿನ ಅಭಿರಕ್ಷೆ ಮತ್ತು ವಿಲೆ.–** ಪ್ರಾಧಿಕಾರವು, ಕಾಣೆಯಾದ ಯಾವ ಸ್ವತ್ತು ಪ್ರಾಧಿಕಾರಕ್ಕೆ ಸೇರಿದ ಅಥವಾ ಅದರ ಒಟ್ಟಾರೆ ನಿಯಂತ್ರಣದಲ್ಲಿರುವ ಯಾವುದೇ ಆವರಣದಲ್ಲಿ ಕಂಡುಬರುವುದೋ ಆ ಯಾವುದೇ ಸ್ವತ್ತಿಗೆ, ಅದರ ಅಭಿರಕ್ಷೆ ಮತ್ತು ವಿಲೆ ಉದ್ದೇಶಕ್ಕಾಗಿ ರಚಿಸಬಹುದಾದಂಥ ವಿನಿಯಮಗಳಿಗೆ ಒಳಪಟ್ಟು ಸುರಕ್ಷಿತ ಅಭಿರಕ್ಷೆಯನ್ನು ಒದಗಿಸತಕ್ಕದ್ದು ಮತ್ತು ಅದನ್ನು ಹಿಂದುರಿಗಿಸತಕ್ಕದ್ದು.

**32. ಪ್ರಾಧಿಕಾರವನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.**– (1) ಕೇಂದ್ರ ಸರ್ಕಾರವು, ಯಾವುದೇ ಕಾಲದಲ್ಲಿ–

(ಎ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಪ್ರಾಧಿಕಾರಕ್ಕೆ ವಿಧಿಸಿರುವ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು, ತೀವ್ರ ತುರ್ತು ಪರಿಸ್ಥಿತಿಯ ಕಾರಣದಿಂದಾಗಿ ನಿರ್ವಹಿಸಲು ಅದಕ್ಕೆ ಸಾಧ್ಯವಾಗಿಲ್ಲವೆಂದು; ಅಥವಾ

(ಬಿ) ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸುವಾಗ ಅಥವಾ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ತನಗೆ ವಹಿಸಿದ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಾಗ ಪ್ರಾಧಿಕಾರವು ಸತತವಾಗಿ ತಪ್ಪಿದೆಯೆಂದು ಮತ್ತು ಹಾಗೆ ತಪ್ಪಿದ ಪರಿಣಾಮವಾಗಿ ಪ್ರಾಧಿಕಾರದ ಹಣಕಾಸು ಪರಿಸ್ಥಿತಿಯು ಅಥವಾ ಸಂಯೋಜಿತ ತನಿಖಾ ಠಾಣೆಯ ಆಡಳಿತವು ಕ್ಷೀಣಿಸಿದೆಯೆಂದು; ಅಥವಾ

(ಸಿ) ಸಾರ್ವಜನಿಕ ಹಿತದೃಷ್ಟಿಯಿಂದ ಪ್ರಾಧಿಕಾರವನ್ನು ರದ್ದುಪಡಿಸುವುದನ್ನು ಅವಶ್ಯಕವಾಗಿಸುವಂಥ ಸಂದರ್ಭ ಸನ್ನಿವೇಶಗಳು ಇವೆ ಎಂದು

– ಅಭಿಪ್ರಾಯಪಟ್ಟರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳಿಗೆ ಮೀರದಂಥ ಅವಧಿಯವರೆಗೆ ಪ್ರಾಧಿಕಾರವನ್ನು ರದ್ದುಪಡಿಸಬಹುದು:

ಪರಂತು, (ಬಿ) ಖಂಡದಲ್ಲಿ ತಿಳಿಸಿದ ಕಾರಣಗಳಿಗಾಗಿ, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮೊದಲು, ಕೇಂದ್ರ ಸರ್ಕಾರವು ಪ್ರಾಧಿಕಾರವನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ಕಾರಣ ತೋರಿಸಲು ಪ್ರಾಧಿಕಾರಕ್ಕೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರವು ಈ ಬಗ್ಗೆ ಯಾವುದಾದರೂ ವಿವರಣೆಗಳನ್ನು ಮತ್ತು ಆಕ್ಷೇಪಣೆಗಳನ್ನು ನೀಡಿದರೆ ಅವುಗಳನ್ನು ಪರಿಶೀಲಿಸತಕ್ಕದ್ದು.

(2) ಉಪಪ್ರಕರಣ (1)ರ ಮೇರೆಗೆ ಪ್ರಾಧಿಕಾರವನ್ನು ರದ್ದುಪಡಿಸಿದ ಅಧಿಸೂಚನೆಯನ್ನು ಪ್ರಕಟಿಸಿದ ನಂತರ,–

(ಎ) ಹಾಗೆ ರದ್ದುಪಡಿಸಿದ ದಿನಾಂಕದಿಂದ ಎಲ್ಲಾ ಸದಸ್ಯರು ತಮ್ಮ ಪದಗಳನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಪ್ರಾಧಿಕಾರವು ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಎಲ್ಲಾ ಅಧಿಕಾರಗಳನ್ನು ಅಥವಾ ನಿರ್ವಹಿಸಬಹುದಾದ ಎಲ್ಲ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ಪುನರ್‌ರಚಿಸುವವರೆಗೆ, ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವ್ಯಕ್ತಿಯು ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ಸಿ) ಪ್ರಾಧಿಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಎಲ್ಲಾ ಸ್ವತ್ತು (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ಪುನರ್‌ರಚಿಸುವವರೆಗೆ ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) ಉಪಪ್ರಕರಣ (1)ರ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾದ ಮೇಲೆ ಕೇಂದ್ರ ಸರ್ಕಾರವು,–

(ಎ) ರದ್ದಿಯಾತಿಯ ಅವಧಿಯನ್ನು ತಾನು ಅಗತ್ಯವೆಂದು ಪರಿಗಣಿಸುವಂತೆ ಆರು ತಿಂಗಳಿಗೆ ಮೀರದಂಥ ಹೆಚ್ಚಿನ ಅವಧಿಯವರೆಗೆ ವಿಸ್ತರಿಸಬಹುದು; ಅಥವಾ

(ಬಿ) ಹೊಸದಾಗಿ ನೇಮಕ ಮಾಡುವ ಮೂಲಕ ಪ್ರಾಧಿಕಾರವನ್ನು ಪುನರ್ ರಚಿಸಬಹುದು ಮತ್ತು ಅಂಥ ಸಂದರ್ಭದಲ್ಲಿ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತಮ್ಮ ಪದಗಳನ್ನು ತೆರವು ಮಾಡಿದಂಥ ಸದಸ್ಯರನ್ನು ನೇಮಕಕ್ಕೆ ಅನರ್ಹರೆಂದು ಭಾವಿಸತಕ್ಕದ್ದಲ್ಲ:

ಪರಂತು, ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದ ಮೇರೆಗೆ ಮೂಲತಃ ನಿರ್ದಿಷ್ಟಪಡಿಸಿದಂಥ ಅಥವಾ ಈ ಉಪಪ್ರಕರಣದ ಮೇರೆಗೆ ವಿಸ್ತರಿಸಿದಂಥ ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಯಾವುದೇ ಕಾಲದಲ್ಲಿ ಈ ಉಪಪ್ರಕರಣದ (ಬಿ) ಖಂಡದ ಮೇರೆಗೆ ಕ್ರಮ ಕೈಗೊಳ್ಳಬಹುದು.

(4) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವಂತೆ ಮಾಡತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ತೆಗೆದುಕೊಂಡ ಯಾವುದೇ ಕ್ರಮದ ಮತ್ತು ಅಂಥ ಕ್ರಮ ಕೈಗೊಳ್ಳಲು

ಕಾರಣವಾದ ಸಂದರ್ಭ ಸನ್ನಿವೇಶಗಳ ಪೂರ್ಣ ವರದಿಯನ್ನು ಸಂಸತ್ತಿನ ಎರಡೂ ಸದನಗಳ ಮುಂದೆ ಸಂಸತ್ತಿನ ನಿಕಟ ತರುವಾಯದ ಅಧಿವೇಶನದಲ್ಲಿ ಇರಿಸತಕ್ಕದ್ದು.

33. **ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.–** (1) ಈ ಅಧಿನಿಯಮದ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಾಗ ಕಾರ್ಯನೀತಿಯ ವಿಷಯಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಲಿಖಿತದಲ್ಲಿ ತನಗೆ ನೀಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡುವುದಕ್ಕೆ ಮುಂಚೆ ಪ್ರಾಧಿಕಾರಕ್ಕೆ ಅದರ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಅವಕಾಶವನ್ನು ನೀಡತಕ್ಕದ್ದು.

(2) ವಿಷಯವು ಕಾರ್ಯನೀತಿಗೆ ಸಂಬಂಧಿಸಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವು ಅಂತಿಮವಾದುದು ಆಗಿರತಕ್ಕದ್ದು.

(3) ಕೇಂದ್ರ ಸರ್ಕಾರವು 11ನೇ ಪ್ರಕರಣದ (2)ನೇ ಉಪಪ್ರಕರಣದ ಖಂಡಗಳ ಮೇರೆಗೆ ಪ್ರಾಧಿಕಾರವು ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಪ್ರಾಧಿಕಾರಕ್ಕೆ ನಿರ್ದೇಶನಗಳನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರವು ಅಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು.

34. **ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಅಂಥ ನಿಯಮಗಳು, ಅದರಲ್ಲೂ ಮುಖ್ಯವಾಗಿ ಮತ್ತು ಹಿಂದೆ ಹೇಳಿದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ–

(ಎ) (5)ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಸದಸ್ಯರ ಪದಾವಧಿ ಮತ್ತು ಸೇವೆಯ ಇತರ ಷರತ್ತುಗಳಿಗೆ;

(ಬಿ) 5ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ತನ್ನ ಪದಕ್ಕೆ ರಾಜೀನಾಮೆ ಸಲ್ಲಿಸಲು ಯಾರೇ ಸದಸ್ಯನು ಕೊಡಬಹುದಾದ ನೋಟೀಸಿನ ಅವಧಿಗೆ;

(ಸಿ) 21ನೇ ಪ್ರಕರಣದ (3)ನೇ ಉಪಪ್ರಕರಣದ (ಬಿ)ಖಂಡದ ಮೇರೆಗೆ ಪ್ರಾಧಿಕಾರವು ನಿಧಿಗಳನ್ನು ಯಾವ ರೀತಿಯಲ್ಲಿ ಹೂಡಬಹುದೋ ಆ ರೀತಿಗೆ;

(ಡಿ) 25ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ವಾರ್ಷಿಕ ಲೆಕ್ಕಪತ್ರಗಳ ವಿವರಣಾ ಪಟ್ಟಿಯನ್ನು ಯಾವ ನಮೂನೆಯಲ್ಲಿ ಸಿದ್ಧಪಡಿಸಿಸಬೇಕೊ ಆ ನಮೂನೆಗೆ;

(ಇ) 26ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ತನ್ನ ಕಾರ್ಯಚಟುವಟಿಕೆಗಳ ವಿವರಗಳನ್ನು ನೀಡುವ ವರದಿಯನ್ನು ಯಾವ ನಮೂನೆಯಲ್ಲಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕೋ ಆ ನಮೂನೆಗೆ; ಮತ್ತು

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯಗಳಿಗೆ

–ಉಪಬಂಧ ಕಲ್ಪಿಸಬಹುದು.

35. **ವಿನಿಯಮಗಳನ್ನು ರಚಿಸಲು ಅಧಿಕಾರ.–** (1) ಪ್ರಾಧಿಕಾರವು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಅಸಂಗತವಲ್ಲದಂಥ ವಿನಿಯಮಗಳನ್ನು ರಚಿಸಬಹುದು.

(2) ಅಂಥ ವಿನಿಯಮಗಳು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ–

(ಎ) 8ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಸಭೆಗಳಲ್ಲಿ ಇರಬೇಕಾದ ಕೋರಂ ಸೇರಿದಂತೆ ಪ್ರಾಧಿಕಾರದ ಸಭೆಗಳು ನಡೆಯುವ ಸಮಯಕ್ಕೆ ಮತ್ತು ಸ್ಥಳಗಳಿಗೆ ಮತ್ತು ಪ್ರಾಧಿಕಾರದ ಕಾರ್ಯಕಲಾಪಗಳ ನಿರ್ವಹಣೆಗೆ ಅನುಸರಿಸಬೇಕಾದ ಕಾರ್ಯವಿಧಾನಕ್ಕೆ;

(ಬಿ) 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ನೇಮಕ ಮಾಡುವಂಥ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ಷರತ್ತುಗಳಿಗೆ ಮತ್ತು ಪರಿಶ್ರಮ ಧನಕ್ಕೆ;

(ಸಿ) (1)ನೇ ಉಪಪ್ರಕರಣದ ಮೇರೆಗೆ ಯಾವ ಕರಾರುಗಳಿಗೆ ಪ್ರಾಧಿಕಾರದ ಸಾಮಾನ್ಯ ಮೊಹರು ಹಾಕಿ ಸೀಲು ಮಾಡಬೇಕೊ ಆ ಕರಾರುಗಳಿಗೆ ಮತ್ತು 18ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಕರಾರುಗಳನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಮಾಡಿಕೊಳ್ಳಬಹುದೋ ಆ ನಮೂನೆಗೆ ಮತ್ತು ರೀತಿಗೆ;

(ಡಿ) 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ವಿಧಿಸಬೇಕಾದ ಫೀಜುಗಳಿಗೆ ಮತ್ತು ಬಾಡಿಗೆಗೆ;

(ಇ) 31ನೇ ಪ್ರಕರಣದ ಮೇರೆಗೆ ಕಾಣೆಯಾದ ಸ್ವತ್ತಿನ ಅಭಿರಕ್ಷೆಗೆ ಮತ್ತು ಅದನ್ನು ಹಿಂದಿರುಗಿಸುವುದಕ್ಕೆ ಮತ್ತು ಕಾಣೆಯಾದ ಸ್ವತ್ತನ್ನು ಯಾವ ನಿಬಂಧನೆಗಳ ಮತ್ತು ಷರತ್ತುಗಳ ಮೇರೆಗೆ ಹಿಂದಿರುಗಿಸಬಹುದೋ ಆ ನಿಬಂಧನೆಗಳಿಗೆ ಮತ್ತು ಷರತ್ತುಗಳಿಗೆ

–ಉಪಬಂಧ ಕಲ್ಪಿಸಬಹುದು.

**36. ನಿಯಮಗಳನ್ನು, ವಿನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ಸಂಸತ್ತಿನ ಮುಂದೆ ಇಡುವುದು.–** ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ಪ್ರತಿಯೊಂದು ವಿನಿಯಮವನ್ನು ಅಥವಾ ಪ್ರತಿಯೊಂದು ಅಧಿಸೂಚನೆಯನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ, ವಿನಿಯಮದಲ್ಲಿ ಅಥವಾ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು, ವಿನಿಯಮವನ್ನು ರಚಿಸಬಾರದೆಂದು ಅಥವಾ ಆ ಅಧಿಸೂಚನೆಯನ್ನು ಹೊರಡಿಸಬಾರದೆಂದು ಎರಡೂ ಸದನಗಳು ಒಪ್ಪಿದರೆ ಆ ನಿಯಮವು, ವಿನಿಯಮವು ಅಥವಾ ಅಧಿಸೂಚನೆಯು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ, ವಿನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕ ಉಂಟು ಮಾಡತಕ್ಕದ್ದಲ್ಲ.

**37. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದರೆ, ಕೇಂದ್ರ ಸರ್ಕಾರವು ಆ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ವಿಹಿತವೆಂದು ತನಗೆ ಕಂಡುಬರಬಹುದಾದಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ ಉಪಬಂಧಗಳನ್ನು ಸಾಮಾನ್ಯ ಅಥವಾ ವಿಶೇಷ ಆದೇಶವನ್ನು ರಾಜಪತ್ರದಲ್ಲಿ ಪ್ರಕಟಿಸಿ ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ, ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.